ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಉಪನಚಿವರು ಹೇಳಿದ್ದರಲ್ಲಿ ಅಲ್ಪಸ್ವಲ್ಪ ಹೆಚ್ಚಾದರೂ ಆ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆಂದು ಹೇಳಿದರು. ಪೂರ್ಣ ಖರ್ಚನ್ನು ರೈತರೇ ಕೊಡತಕ್ಕದ್ದು ಎಂದು ಗೊತ್ತಾಗಿದೆ. ಇದನ್ನು ತಮ್ಮ ಅಧಿಕಾರಿಗಳು ರಿಪೋರ್ಟ್ ಕೊಟ್ಟಿರುವುದರಲ್ಲಿ ತಿಳಿಸಿದ್ದಾರೆ. ಅದರಿಂದ ಈ ಮೂರು ಯೋಜನೆಗಳನ್ನೂ ಈ ಸಾರಿ ಕಾರ್ಯಗತ ಮಾಡುವುದಕ್ಕೆ ನಿರ್ದಿಷ್ಟವಾದ ಉತ್ತರವನ್ನು ಕೊಡುತ್ತೀರಾ ಸ್ವಾಮಿ ?

Sri ALUR HANUMANTHAPPA.—The entire list is pending before the Government. We will scrutinise the whole thing and the needs of the localities. Then we will certainly consider the suggestion given by the Hon'ble Member.

Mr. SPEAKER.—Next question.

Starting of Lift Irrigation Schemes.

*Q.—272. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether the leaders and people of Arkalgud Taluk have given representations for starting Lift Irrigation Schemes in several villages of Arkalgud Taluk, Hassan District on the banks of Cauvery and Hemavathi rivers ;

(*b*) if so, whether plans and estimates have been prepared and sanctioned in this behalf ?

A.—Sri ALUR HANUMANTHAPPA (Deputy Minister for Minor Irrigation).—

(*a*) Yes.

(*b*) Two estimates for lift irrigation schemes at Banagundi and Kattepura across the river Cauvery have been prepared but they have not yet been considered for sanction since Government is still considering the policy to be adopted regarding community lift irrigation schemes. Six more lift irrigation schemes are under detailed investigations in the Arkalgud Taluk.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸರ್ಕಾರದವರು ಈ ಲಫ್ಟ್ ಇರಿಗೇಷನ್ ಸ್ಕೀಮುಗಳನ್ನು ತಯಾರುಮಾಡಿ ಹಣಕ್ಕೆ ಮತ್ತು ಒಪ್ಪಿಗೆಗೆ ಕೇಂದ್ರಸರ್ಕಾರಕ್ಕೆ ಕಳುಹಿಸುತ್ತೇವೆಂದು ಹೇಳಿದರು. ಆದರೆ ನಮ್ಮ ಹಣದಿಂದಲೇ ಈ ಯೋಜನೆಗಳು ಲಫ್ಟ್ ಇರಿಗೇಷನ್ನಿಗೆ ಬಹಳ ಉಪಯುಕ್ತವಾಗಿ ಹಾಗೂ ರಾಥದಾಯಕವಾಗಿರುವುದರಿಂದ ನಮ್ಮ ಸರ್ಕಾರ ಮೈನರ್ ಇರಿಗೇಷನ್‌ಗೆ ಒದಗಿಸಿರ ತಕ್ಕ ಹಣದಿಂದಲೇ ಈ ಯೋಜನೆಯನ್ನು ಮಾಡುವುದಕ್ಕೆ ತೀರ್ಮಾನವನ್ನು ತೆಗೆದುಕೊಂಡಿದ್ದಾರೆಯೇ?

†ಶ್ರೀ ಆಲೂರು ಹನುಮಂತಪ್ಪ.—ಅದಕ್ಕಾಗಿ ಸರ್ಕಾರದವರು ಈಗಾಗಲೇ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಈ ಯೋಜನೆಯ ಕಾರ್ಯಗಳನ್ನು ಪರಸ್ಪರ ಸಹಕಾರ ಸಂಘಗಳಿಗೆ ವಹಿಸಿದರೆ ನಿಧಾನವಾಗುತ್ತದೆಂದು ಸರ್ಕಾರದವರೇ ಆವನ್ನು ಮಾಡುತ್ತಿದ್ದಾರೆ. ಆದಕ್ಕೆ ತಕ್ಕ ಹಣವನ್ನು ಒದಗಿಸಲಾಗಿದೆ. ಈಗಾಗಲೇ ಕೆಲವು ಜಿಲ್ಲೆಗಳಲ್ಲಿ ಈ ಯೋಜನೆಗಳನ್ನು ಸೇರಿಸಿದ್ದೇವೆ. ಎಲ್ಲೆಲ್ಲ ಐನ್ನೂ ಸೇರಿಲ್ಲವೋ ಅಲ್ಲ ಆವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ತಾಲ್ಲೂಕಿನಲ್ಲಿ ಎರಡು ಯೋಜನೆಗಳು ತಯಾರಾಗಿವೆ ಯೆಂದು ಉತ್ತರದಲ್ಲಿ ಹೇಳಿದೆ. ಆ ಅಂದಾಜುಗಳು ತಯಾರಾಗಿದ್ದರೆ ಕೂಡಲೇ ಆ ಕಾಮಗಾರಿ ಗಳನ್ನು ಸರ್ಕಾರದವರು ಕೈಗೊಳ್ಳುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅರಕಲಗೂಡು ಮತ್ತು ಹೊಳೇನರಸೀಪುರ—ಈ ಎರಡು ತಾಲ್ಲೂಕುಗಳಲ್ಲಿ ಲಿಫ್ಟ್ ನೀರಾವರಿ ಯೋಜನೆಗಳಿಗೆ ಆದ್ಯತೆ ಇದೆ. ಆದ್ದರಿಂದ ಅವನ್ನು ಅಲ್ಲಿ ಕಡ್ಡಾಯವಾಗಿ ಸರ್ಕಾರದವರು ತೆಗೆದುಕೊಳ್ಳುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಈ ಹೊಳೆಗಳಲ್ಲಿ ತೆಗೆದು ಕೊಂಡು ಆ ಎರಡು ತಾಲ್ಲೂಕುಗಳಲ್ಲಿ ಸುಮಾರು 25 ಲಕ್ಷ ರೂಪಾಯಿಗಳ ಅಂದಾಜು ಈಗಾಗಲೇ ಚೀಫ್ ಇಂಜನಿಯರ್ ಆಫೀಸಿನಲ್ಲಿ, ಸರ್ಕಾರದ ಮಟ್ಟದಲ್ಲಿ ಸ್ಕ್ರುಟಿನಿಗೋಸ್ಕರ ಕಳುಹಿಸಿರುವುದರಿಂದ, ಅಷ್ಟು ಹಣವನ್ನು ಈ ವರ್ಷ ಒದಗಿಸಿದರೆ ಸುಮಾರು ಐದಾರು ಸಾವಿರ ಎಕರೆಗಳಿಗೆ ನೀರಾವರಿಯಾಗುವುದರಿಂದ ಮತ್ತು ಅಲ್ಲಿ ಎರಡು ಬೆಳೆಗಳನ್ನು ಬೆಳೆಯುವುದಕ್ಕೆ ಅವಕಾಶವಿರುವುದರಿಂದ ಸರ್ಕಾರದವರು ಈ ಕಡೆಗೆ ಪೂರ್ಣವಾಗಿ ಗಮನಕೊಡುತ್ತಾರೆಯೆ ?

ಶ್ರೀ ಆಲೂರು ಹನುಮಂತಪ್ಪ.—ಒಂದೊಂದು ಯೋಜನೆಯನ್ನೂ ಪ್ರತ್ಯೇಕವಾಗಿ ಪರೀಕ್ಷೆ ಮಾಡತಕ್ಕ ಕೆಲಸದ ಜೊತೆಗೆ ಈಗಾಗಲೇ ಸರ್ಕಾರದವರು ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಮತ್ತು ಮೈನರ್ ಇರಿಗೇಷನ್ ಎಗ್ಸಿಕ್ಯುಟಿವ್ ಇಂಜನಿಯರ್ ಅವರ ಸಿಬ್ಬಂದಿಗೆ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಕಾವೇರಿ ಮತ್ತು ಹೇಮಾವತಿ ನದಿಗಳ ದಡಗಳ ಮೇಲೆ ಎಲೆಕ್ಟ್ರಿಕ್ ಟ್ರಂಕ್ ಲೈನುಗಳನ್ನು ಎಳೆದರೆ ಸಾಮುದಾಯಕವಾಗಿ ನೂರಾರು ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಮಾಡತಕ್ಕ ವ್ಯವಸ್ಥೆಯನ್ನು ಸಿದ್ಧಪಡಿಸಿಯೆಂಬುದಾಗಿ ಅವರಿಗೆ ಹೇಳಿದ್ದೇವೆ. ಅವರು ಈಗಾಗಲೇ ಆ ಕಾರ್ಯವನ್ನು ಮಾಡುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರಾಜ್ಯದಲ್ಲಿ ಎಲ್ಲೆಲ್ಲಿ ತಲಪರಿಗೆಗಳು ಹಾಗೂ ನದಿಗಳು ಹರಿಯುತ್ತಿವೆಯೋ ಅಲ್ಲಲ್ಲಿ ಈ ಲಿಫ್ಟ್ ನೀರಾವರಿ ಯೋಜನೆಗಳನ್ನು ಸರ್ವೆ ಮಾಡಿಸುವುದಕ್ಕೆ ಏನಾದರೂ ಸರ್ಕಾರ ಪ್ರಯತ್ನ ಮಾಡುತ್ತಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ನೀರು ಯಾವಾಗಲೂ ಬೇಸಿಗೆ ಮತ್ತು ಮಳೆಗಾಲದಲ್ಲಿ ಯಥೇಚ್ಛವಾಗಿ ಸಿಕ್ಕುವ ಪ್ರದೇಶವಾಗಿದ್ದರೆ ಬಹುಶಃ ಅದು ಪೆರಿನಿಯರ್ ಫ್ಲೋ ಆಗಿದ್ದರೆ ಅಂತಹ ಕಡೆ ಈ ಯೋಜನೆಗಳನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆ. ಮಾನ್ಯ ಸದಸ್ಯರು ಜಯಮಂಗಲ ನದಿಯ ವಿಚಾರವಾಗಿ ಮಾತನಾಡಿರಬೇಕೆಂದು ಕಾಣುತ್ತದೆ. ಅದನ್ನೂ ಸಹ ಸರ್ಕಾರದವರು ಗಮನದಲ್ಲಿಟ್ಟುಕೊಳ್ಳುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸುವರ್ಣ ನದಿಯ ದಡದಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದರು. ಇದರಿಂದ 1,200 ಎಕರೆಗೆ ಸಾಗುವಳಿಯಾಗುತ್ತದೆ. ಆದ್ದರಿಂದ ಎಲ್ಲೆಲ್ಲಿ ತಲಪರಿಗೆಗಳಿವೆಯೋ ಅಲ್ಲೆಲ್ಲಾ ಒಂದು ಸಮಗ್ರವಾದ ಯೋಜನೆ ಹಾಕಿಕೊಂಡು, ಸರ್ಕಾರದವರು ಕಾರ್ಯಗತ ಮಾಡುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಸರ್ಕಾರದ ಉದ್ದೇಶವೂ ಅಷ್ಟೇ. ಎಲ್ಲೆಲ್ಲಿ ನೀರು ಯಥೇಚ್ಛವಾಗಿವೆಯೋ ಅವೆಲ್ಲವನ್ನೂ ಸಂಪೂರ್ಣವಾಗಿ ಉಪಯೋಗಿಸಬೇಕೆಂದು ಸರ್ಕಾರ ಒಪ್ಪಿಕೊಂಡಿದೆ. ಲೋಕೋಪಯೋಗಿ ಇಲಾಖೆಯವರು ಅವನ್ನು ಮಾಡುತ್ತಿದ್ದಾರೆ.

ಶ್ರೀ ಅಂದಾನಯ್ಯ.—ಇಲ್ಲಿಯವರೆಗೂ ರಾಜ್ಯದಲ್ಲಿ ಎಷ್ಟೋ ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಸರ್ಕಾರದವರು ಕೈಗೊಂಡಿದ್ದಾರೆ. ಅದರ ಪೈಕಿ ಕೇಂದ್ರ ಸರ್ಕಾರದವರು ಎಷ್ಟು ಮಂಜೂರು ಮಾಡಿದ್ದಾರೆ, ಅದು ಯಾವ್ಯಾವ ಜಿಲ್ಲೆಗಳಲ್ಲಿ ?

Mr. SPEAKER.—Much beyond the original Question, let alone supplementary. All right, if the information is ready it may be given.

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ 31 ಯೋಜನೆಗಳು 44 ಲಕ್ಷ ರೂಪಾಯಿಗಳಲ್ಲಿ ಅಂದಾಜಾಗಿವೆ. ಅವಕ್ಕೆ ಕೇಂದ್ರ ಸರ್ಕಾರ ಮಂಜೂರಾತಿಯೂ ಕೊಟ್ಟಿದೆ. ಜೊತೆಗೆ ಇನ್ನೂ 81 ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅವೂ ಸಹ ಕೇಂದ್ರದ ಮಂಜೂರಾತಿಯನ್ನು ಪಡೆಯುತ್ತವೆಂದು ನನಗೆ ನಂಬಿಕೆ ಇದೆ. ಜೊತೆಗೆ ಈಗ ರಾಜ್ಯದಲ್ಲಿ ಸುಮಾರು ನಾಲ್ಕುವರೆ ಕೋಟಿ ರೂಪಾಯಿಗಳಲ್ಲಿ ಹೊಸ ಯೋಜನೆಗಳನ್ನು ಅಂದರೆ ಕೆಲವು ಭಾಗಗಳಲ್ಲಿ ಕೆರೆ, ಪಿಕಪ್, ಚಾನಲ್‌ಗಳನ್ನೂ ಮತ್ತು ಲಿಫ್ಟ್ ಇರಿಗೇಷನ್ ಯೋಜನೆಗಳನ್ನೂ ಕೈಗೊಳ್ಳತಕ್ಕ ಕಾರ್ಯಕ್ರಮಗಳನ್ನು ನಾವು ಸೇರಿಸಿಕೊಂಡಿದ್ದೇವೆ.

ಶ್ರೀ ಎಸ್. ಗೋಪಾಲ ಗೌಡ.—ಸರ್ಕಾರದವರು ಸಾಮುದಾಯಿಕ ಲಿಫ್ಟ್ ಇರಿಗೇಷನ್ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ, ಆದರೆ ಈ ಯೋಜನೆಗಳ ಮಂಜೂರಾತಿ ಬಗ್ಗೆ ಪರಿಶೀಲನೆ ಮಾಡಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಲಿಫ್ಟ್ ಇರಿಗೇಷನ್ ಬಗ್ಗೆ ಸರ್ಕಾರಕ್ಕೆ ಏನು ತೊಂದರೆ

ಇದೆ. ಈಗ ತುಂಗಾ, ಭದ್ರಾ, ವರದಾ, ಕುಮದ್ವತಿ ನದಿಗಳು ಸದಾ ಕಾಲವೂ ತುಂಬಿ ಹರಿಯುತ್ತಿರುವುದರಿಂದ ಅವುಗಳ ಅಕ್ಕಪಕ್ಕದಲ್ಲಿ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಏನಾದರೂ ನಲಹೆ ಕೊಟ್ಟು ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಯಾವ್ಯಾವ ಸ್ಥಳದಲ್ಲಿ ಎಲೆಕ್ಟ್ರಿಕ್ ಟ್ಯೂಬ್ ಲೈನುಗಳನ್ನು ಒದಗಿಸಬೇಕೆನ್ನುವುದು ಸರ್ಕಾರಕ್ಕೆ ಒಂದು ಮುಖ್ಯವಾದ ಕೆಲಸ. ಆ ಬಗ್ಗೆ ಇರತಕ್ಕ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಈಗಾಗಲೇ ಪ್ರಯತ್ನಗಳು ನಡೆದಿವೆ. ಅಲ್ಲದೆ ಅದಕ್ಕೆ ಬೇಕಾದಂಥ ಉಪಕರಣಗಳನ್ನೂ ಸಹ ಒದಗಿಸುವುದೂ ಬಹಳ ಪ್ರಾಮುಖ್ಯವಾದ ಕೆಲಸ. ಅದಕ್ಕೆ ಎಲೆಕ್ಟ್ರಿಸಿಟಿ ಬೋರ್ಡಿನವರು ತ್ವರಿತವಾಗಿ ಒಂದು ಕಾಂಪ್ರಹೆನ್ಸಿವ್ ಸ್ಕೀಮನ್ನು ಸಿದ್ಧಪಡಿಸಿಕೊಂಡು ಎಲ್ಲಾ ಕಡೆಗಳಲ್ಲಿಯೂ ಅದರಲ್ಲೂ ಮುಖ್ಯವಾಗಿ ನದಿಯ ದಡಗಳಲ್ಲಿ ಎಲೆಕ್ಟ್ರಿಕ್ ಟ್ಯೂಬ್‌ಲೈನುಗಳನ್ನು ಎಳೆಯುವ ಮೂಲಕ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಕೈಗೊಳ್ಳುತ್ತಿದ್ದಾರೆ. ಸರ್ಕಾರದವರೂ ಸಹ ಆ ಯೋಜನೆಗಳನ್ನು ಕೂಡಲೇ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಲಿಫ್ಟ್ ನೀರಾವರಿ ಯೋಜನೆಗಳನ್ನು ತಯಾರಿಸಲು ಸರ್ಕಾರದವರು ಈಗಾಗಲೇ ತೀರ್ಮಾನವನ್ನು ಕೈಗೊಂಡಿದ್ದಾರೆಂದು ಹೇಳಿದರು. ಆದರೆ ಅಂತಿಮವಾಗಿ ಈ ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಹಾಕುವ ಕಾಮಗಾರಿಯನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸುವಂತೆ ಸರ್ಕಾರದವರು ತೀರ್ಮಾನ ಮಾಡಿದ್ದಾರೋ ಅಥವಾ ಸಹಕಾರ ಸಂಸ್ಥೆಗಳ ಮೂಲಕ ಮಾಡುವುದಕ್ಕೆ ತೀರ್ಮಾನ ಮಾಡಿದ್ದಾರೋ ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ಸರ್ಕಾರದವರೇ ಆ ಕಾರ್ಯವನ್ನು ಮಾಡಿದರೆ ಒಳ್ಳೆಯದು ಎಂದು ತೀರ್ಮಾನ ಮಾಡಿದ್ದಾರೆ. ಆ ಪ್ರಕಾರ 31 ಯೋಜನೆಗಳು ಕಾರ್ಯಗತವಾಗುತ್ತಿವೆ. ಅದರ ಜೊತೆಗೆ ಹೊಸ ಯೋಜನೆಗಳನ್ನು ಲೋಕೋಪಯೋಗಿ ಇಲಾಖೆಯವರು ಮಾಡಿದರೆ ಪಕ್ಕಾ ಫಲತಾಂಶ ಕೊಡುವ ಯೋಜನೆಗಳು ಆಗಬಹುದು. ಆದ್ದರಿಂದ ಇವತ್ತಿನ ದಿವಸ ತಾಲ್ಲೂಕು ಬೋರ್ಡುಗಳಿಗಾಗಲೀ ಅಥವಾ ಕೋ-ಆಪರೇಟಿವ್ ಸೊಸೈಟಿಗಳಿಗಾಗಲೀ ಈ ಯೋಜನೆಗಳನ್ನು ಕಾರ್ಯಗತ ಮಾಡತಕ್ಕ ಜವಾಬ್ದಾರಿಯನ್ನು ಯಾವ ರೀತಿಯಲ್ಲಿ ವಹಿಸಬೇಕು ಎಂಬ ಬಗ್ಗೆ ಸರ್ಕಾರದವರು ಇನ್ನೂ ತೀರ್ಮಾನ ಮಾಡಲಿಲ್ಲ.

Sri GANJI VEERAPPA.—May I know whether atleast in respect of those cases where estimates are ready and perennial supply of water and power lines are there, without waiting for the Centre's assistance the Government take up such works on top priority basis ?

Sri ALUR HANUMANTHAPPA.—It is a very feasible suggestion and the Government is seriously considering to take up such schemes and see they yield quick results.

ಶ್ರೀಮತಿ ಸುಶೀಲಬಾಯಿ ಹೀರಾಚಂದ್‌ಷಾ.—ಬಿಜಾಪುರ ಜಿಲ್ಲೆಯೊಳಗೆ ಲಿಫ್ಟ್ ಇರಿಗೇಷನ್ನಿಗೆ ಅನುಕೂಲವಾಗುವಂತೆ ಎಲೆಕ್ಟ್ರಿಕ್ ಟ್ಯೂಬ್ ಲೈನುಗಳನ್ನು ಸರ್ಕಾರದವರು ಜಾಗ್ರತೆಯಾಗಿ ಎಳೆಯುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಎಲ್ಲೆಲ್ಲಿ ಹೊಳೆ ದಂಡೆ ಇದೆಯೋ ಅಲ್ಲಲ್ಲಿ ಎಲೆಕ್ಟ್ರಿಕ್ ಲೈನುಗಳನ್ನು ಎಳೆಯುತ್ತೇವೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಉಪಸಚಿವರು ಮೈನರ್ ಇರಿಗೇಷನ್ ಬಗ್ಗೆ ಮಾಸ್ಟರ್ ಪ್ಲಾನ್ ಮಾಡುತ್ತೇವೆಂದು ಹಿಂದೆ ಹೇಳಿದ್ದರು. ಅದೇ ರೀತಿ ಈ ಸ್ಕೀಮು ಮಾಸ್ಟರ್ ಪ್ಲಾನಿನಲ್ಲಿ ಸೇರಿದೆಯೇ. ಹಾಗಾದರೆ ಇದುವರೆಗೆ ಕಾರ್ಯಗತವಾದ ಯೋಜನೆಗಳು ಯಾವುವು ? ಇಷ್ಟು ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಈ ವರ್ಷ ತೆಗೆದುಕೊಳ್ಳುತ್ತೇವೆಂದು ಮತ್ತು ಇಷ್ಟು ಹಣವನ್ನು ಖರ್ಚು ಮಾಡುತ್ತೇವೆಂದು ನಿರ್ದಿಷ್ಟವಾಗಿ ಹೇಳಿ ಆ ಬಗ್ಗೆ ಒಂದು ಮಾಸ್ಟರ್ ಪ್ಲಾನನ್ನು ಈ ಶಾಸನಸಭೆಯ ಮುಂದೆ ಇಡರಾಗುತ್ತದೆಂದು ಸರ್ಕಾರದವರು ಭರವಸೆಯನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಮಾಸ್ಟರ್ ಪ್ಲಾನ್ ಅಂದರೆ, ಈ ಬೃಹತ್‌ಯೋಜನೆಗೆ 88 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. 16,800 ಯೋಜನೆಗಳು ಇನ್ನೂ ಆಗಬೇಕಾಗಿವೆ. 13 ಲಕ್ಷ ಎಕರೆಗಳಿಗೆ ನೀರು ಒದಗಿಸುವಂತಹ ಯೋಜನೆಗಳನ್ನು ಮಾಡಲು ನಮ್ಮ ಮೈನರ್ ಇರಿಗೇಷ್

(ಶ್ರೀ ಆಲೂರು ಹನುಮಂತಪ್ಪ)

ಡಿವಿಜನ್ನಿನವರು ಈಗಾಗಲೇ ಪ್ರಿಲಿಮಿನರಿ ಸರ್ವೆ ಮತ್ತು ಇನ್‌ವೆಸ್ಟಿಗೇಷನ್ ನಡೆಸುತ್ತಿದ್ದಾರೆ. ಹಂತ ಹಂತವಾಗಿ ಆ ಕೆಲಸಗಳು ನಡೆಯುತ್ತಿವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಮಾಡಿದೆ. ಕೆರೆ ಕಟ್ಟಿಗಳಿಗಾಗಿ 37 ಕೋಟಿ ರೂಪಾಯಿಗಳನ್ನು ಈಗಾಗಲೇ ರಾಜ್ಯ ಸರ್ಕಾರದವರು ಖರ್ಚುಮಾಡಿದ್ದಾರೆ. ಆದರೆ ಮಾನ್ಯ ಸದಸ್ಯರು ಆಲೋಚನೆ ಮಾಡಿದ ಹಾಗೆ ಇಲ್ಲಿ ಹೇಳುವುದು ಸರಿಯಿಲ್ಲ. ಆ ಯೋಜನೆಗಳನ್ನು ಕಾರ್ಯಗತ ಮಾಡಿರುವುದರಲ್ಲಿ ಬಹಳ ಪ್ರಗತಿಯನ್ನು ಸಾಧಿಸಿದ್ದೇವೆ. ಅದು ಬರಿ ಮೆಚ್ಚಿಗೆ ಮಾತೇ ನಲ್ಲ, ಕಾರ್ಯತಃ ಮಾಡಿದ್ದೇವೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—31 ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ತೆಗೆದುಕೊಂಡಿದ್ದೇವೆಂದು ಮಾನ್ಯ ಉಪಮಂತ್ರಿಗಳು ಹೇಳಿದರು. ಅವನ್ನು ಕಾರ್ಯಗತಮಾಡುವ ಸ್ಥಿತಿಯಲ್ಲಿ ಸರ್ಕಾರದವರು ಕ್ರಮವನ್ನು ತೆಗೆದುಕೊಂಡಿದ್ದಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ 31 ಯೋಜನೆಗಳು ಕಾರ್ಯಗತವಾಗುತ್ತಿವೆ. ಕೇಂದ್ರ ಸರ್ಕಾರದವರು ಈ ವರ್ಷ ಕೇವಲ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದು ಮಾತ್ರವಲ್ಲ. ಅದಷ್ಟು ಜಾಗ್ರತೆ ಅವನ್ನು ಕಾರ್ಯಗತಮಾಡಬೇಕೆಂದು ಹೇಳಿರುವುದರಿಂದ ಅನೇಕ ಕಡೆಗಳಲ್ಲಿ ಈಗಾಗಲೇ ಪಂಪುಸೆಟ್ಟುಗಳನ್ನೂ ಹಾಗೂ ಎರೆಕ್ಟಿಕ್ ಟ್ರಂಕ್ ಲೈನುಗಳನ್ನೂ ಎಳೆಯುತ್ತಿದ್ದೇವೆ. ಪಂಪುಸೆಟ್ಟುಗಳನ್ನು ಬೇರೆ ಕೊಟ್ಟಿದ್ದೇವೆ, ಹೀಗೆ ಎರ್ರಾ ಕೆಲಸ ಕಾರ್ಯಗಳೂ ಬಹಳ ವೇಗವಾಗಿ ನಡೆಯುತ್ತಿವೆ. ಆ ವಿಚಾರವನ್ನು ಬೇಕಾದರೆ ಮಾನ್ಯ ಸದಸ್ಯರು ಪರಿಶೀಲನಬಹುದು.

1-30 P.M.

ಶ್ರೀ ಜೆ. ದೇವಯ್ಯ.—ಇಂಡಿಯಾ ಸರ್ಕಾರದವರು 31 ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಮಂಜೂರು ಮಾಡಿದ್ದಾರೆ, ಎಂದು ಹೇಳಿದ್ದೀರಿ. ಅವುಗಳನ್ನು ಯಾವ ಯಾವ ಡಿಸ್ಟ್ರಿಕ್ಟ್‌ಗಳಿಗೆ ಕೊಟ್ಟಿದ್ದಾರೆ ?

ಶ್ರೀ ಆಲೂರು ಹನುಮಂತಪ್ಪ.—ಆ ಪಟ್ಟಿ ಬೇಕಾದರೆ ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

Government and Private Colleges in the State.

*Q.—141. Sri C. S. HULKOTI (Mundargi).—

Will the Government be pleased to state :—

(*a*) the total number of Government and Private Colleges in the State and their location ;

(*b*) the total number of students in each of the Government and private Colleges during the years 1961-62 ; 1962-63 and 1963-64 ;

(*c*) the total amount of recurring and non-recurring expenditure incurred by the Government in each of the Government Colleges during the above said period ;

(*d*) the total fee income from each of the Government and private Colleges in the state during the above said years ;

(*e*) the total amount of grant paid to each of the private Colleges during the above period by the Government ?